**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ 144/2019**

ಪಿಡಬ್ಲ್ಯೂ: 4

ಸಿಡಬ್ಲ್ಯೂ: 4

ಹೆಸರು : ಸುನೀಲ ತಂದೆ: ಬಸವರಾಜ ತೋಟಗೇರ

ವಯಸ್ಸು : 39 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಬ್ಯಾಡಗಿ

ದಿನಾಂಕ : 13.09.2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1) ದಿ: 27.12.2018 ರಂದು ಚಾಸಾ-14 ರವರು ನನ್ನನ್ನು ಮತ್ತು ಚಾಸಾ-2 ರವರನ್ನು ಪೋಲೀಸ್ ಠಾಣೆಗೆ ಬರ ಹೇಳಿದ್ದು, ನಾವು ಸಂಜೆ ಅಲ್ಲಿಗೆ ಹೋಗಿರುತ್ತೇವೆ. ನಂತರ ಚಾಸಾ-9 ರಿಂದ ಚಾಸಾ-11 ರವರು ಹಾಜರುಪಡಿಸಿದ ಮೊಬೈಲಗಳ ಜಪ್ತು ಪಂಚನಾಮೆಯನ್ನು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಸಾಯಂಕಾಲ 05-30 ರಿಂದ 06-30 ರ ನಡುವಿನ ಅವಧಿಯಲ್ಲಿ ಪೋಲೀಸ್ ಠಾಣೆಯಲ್ಲಿ ತಯಾರಿಸಿರುತ್ತಾರೆ. ಸಾಕ್ಷಿಯು ಸದರಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-33 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-33(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ ಸಾಕ್ಷಿಯ ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಗಲೇ ಕ್ರಮವಾಗಿ ನಿಪಿ-34 ರಿಂದ ನಿಪಿ-37 ಎಂದು ಗುರುತಿಸಲಾಗಿರುತ್ತದೆ.

2) ದಿ: 28.12.2018 ರಂದು ಪೋಲೀಸರು ಆರೋಪಿತರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿದ್ದು, ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಬೆಳಗ್ಗೆ 08-15 ರಿಂದ 09-00 ರ ನಡುವಿನ ಅವಧಿಯಲ್ಲಿ ಆರೋಪಿತರು ತೋರಿಸಿದ ಕಳ್ಳತನ ಮಾಡಿದ ಅಂಗಡಿಯ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಆ ಸಮಯದಲ್ಲಿ ಪೋಲೀಸರು ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆ ಸಾಕ್ಷಿಯು ಆರೋಪಿತರುಗಳು ತೋರಿಸಿದ ಕಳ್ಳತನ ಮಾಡಿದ ಅಂಗಡಿಯ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಪಂಚನಾಮೆಯು ಈಗಾಗಲೇ ನಿಪಿ-25 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-25(ಬಿ) ಎಂದು ಗುರುತಿಸಲಾಯಿತು ಮತ್ತು ಭಾವಚಿತ್ರಗಳನ್ನು ಈಗಾಗಲೇ ಕ್ರಮವಾಗಿ ನಿಪಿ-26 ಮತ್ತು ನಿಪಿ-27 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

3) ದಿಃ 28.12.2018 ರಂದು ಆರೋಪಿತರು ನಮ್ಮ ಸಮಕ್ಷಮ ಪೋಲೀಸರಿಗೆ ತಾವು ಕಳುವು ಮಾಡಿದ ವಸ್ತುಗಳನ್ನು ಬಚ್ಚಿಟ್ಟಿರುವ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದ್ದರಿಂದ ಪೋಲೀಸರು ನನ್ನನ್ನು, ಚಾಸಾ-2 ಮತ್ತು ಆರೋಪಿತರುಗಳನ್ನು ಪೋಲೀಸ್ ವಾಹನದಲ್ಲಿ ಕರೆದುಕೊಂಡು ಹೋಗಿದ್ದು, ನಾವು ಹಂಸಭಾವಿ-ಸಾತೇನಹಳ್ಳಿ ಮಾರ್ಗವಾಗಿ ನಿಟ್ಟೂರು ಗ್ರಾಮಕ್ಕೆ ಹೋಗಿದ್ದು ಅಲ್ಲಿ ಒಂದು ಕಬ್ಬಿನ ಹೊಲದಲ್ಲಿ ಆರೋಪಿತರುಗಳು ಮೊಬೈಲ್ ಬಚ್ಚಿಟ್ಟಿದ್ದನ್ನು ತೋರಿಸಿದ್ದು, ನಂತರ ಪೋಲೀಸರು ಮುಂಜಾನೆ 10-30 ರಿಂದ 12-30 ಗಂಟೆಯ ನಡುವಿನ ಅವಧಿಯಲ್ಲಿ ಸದರಿ ಸ್ಥಳದ ಪಂಚನಾಮೆಯನ್ನು ತಯಾರಿಸಿ, ಕಳುವುಗೈದ ಮು.ಮಾಗಳನ್ನು ಸದರಿ ಪಂಚನಾಮೆಯಡಿಯಲ್ಲಿ ಅಮಾನತು ಮಾಡಿರುತ್ತಾರೆ. ಆರೋಪಿತರು ಕಳುವು ಗೈದ ಮೊಬೈಲಗಳನ್ನು ಒಂದು ರಟ್ಟಿನ ಬಾಕ್ಸಿನಲ್ಲಿ ಇರಿಸಿದ್ದು, ಅದನ್ನು ಪೋಲೀಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ತೆರೆದಿರುತ್ತಾರೆ.

4) ಸಾಕ್ಷಿಯು ಸದರಿ ಮಾಲು ಜಪ್ತು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಮಾಲು ಜಪ್ತುಪಂಚನಾಮೆಯು ಈಗಾಗಲೇ ನಿಪಿ-28 ಎಂದು ಗುರುತಿಸಲ್ಪಟ್ಟಿದ್ದು ಅದರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-28(ಸಿ), ನಿಪಿ-28(ಡಿ)ಎಂದು ಗುರುತಿಸಲಾಯಿತು ಆ ಸಮಯದಲ್ಲಿ ಪೋಲೀಸರು ತೆಗೆದ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ-29 ರಿಂದ ನಿಪಿ-32 ಎಂದು ಗುರುತಿಸಲಾಗಿರುತ್ತದೆ. ಸದರಿ ಸ್ಥಳದಿಂದ ಪೋಲೀಸರು ಆರೋಪಿತರುಗಳು ಕೃತ್ಯಕ್ಕೆ ಬಳಸಿದ ಕಟ್ಟರನ್ನು ಸಹ ಸದರಿ ಪಂಚನಾಮೆಯಡಿ ಪೋಲೀಸರು ಜಪ್ತುಪಡಿಸಿಕೊಂಡಿರುತ್ತಾರೆ. ಪೋಲೀಸರು ನಿಪಿ-28 ಪಂಚಾನಾಮೆಯನ್ನು ತಯಾರಿಸುವ ಕಾಲಕ್ಕೆ ಜಪ್ತುಪಡಿಸಿದ ಕಟ್ಟರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು. ಮಾ-2 ಎಂದು ಗುರುತಿಸಲಾಯಿತು.

5) ದಿನಾಂಕಃ 27.12.2018 ರಂದು ಬ್ಯಾಡಗಿ ಪೋಲೀಸರು ಪೋಲೀಸ್ ಠಾಣೆಗೆ ನನ್ನನ್ನು ಮತ್ತು ಚಾಸಾ-2 ರವರನ್ನು ಬರಹೇಳಿದ್ದರಿಂದ ನಾವು ಠಾಣೆಗೆ ಹಾಜರಾಗಿ ಚಾಸಾ-8 ರವರು ಹಾಜರುಪಡಿಸಿದ ಈ ಪ್ರಕರಣದಲ್ಲಿ ಕಳುವು ಮಾಡಿದ ನೀಲಿ ಬಣ್ಣದ ರೆಡ್ ಮಿ ಕಂಪನಿಯ ಆರ್.ಎ ಮೊಬೈಲನ್ನು ಹಾಜರುಪಡಿಸಿದ್ದು ಠಾಣೆಯಲ್ಲಿ ಬೆಳಗ್ಗೆ 11-00 ರಿಂದ 11-45 ರ ನಡುವಿನ ಅವಧಿಯಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸಾಕ್ಷಿಯ ಸದರಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು. ಆರೋಪಿತನಿಂದ ಪೋಲೀಸರು ಜಪ್ತುಪಡಿಸಿದ ಮೊಬೈಲಗಳನ್ನು ಸಾಕ್ಷಿಯು ನಿಪಿ-10 ರಿಂದ ನಿಪಿ-22 ರಲ್ಲಿ ಕಾಣುವ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ

6) ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಹಾಜರು ಇರುವ 1 ನೇ ಆರೋಪಿತನನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, 2 ನೇ ಆರೋಪಿತನು ಗೈರು ಹಾಜರಿದ್ದು ಆತನ ಗುರುತು ಪತ್ತೆಗಾಗಿ ಆತನ ವಕೀಲರು ತಕರಾರು ಇಲ್ಲವೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/-
ಜೆಎಂಎಫ್‌ಸಿ, ಬ್ಯಾಡಗಿ.

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು)